# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಶಾಶ್ವತ ದಾಖಲೆಗಳ ಸ್ಕ್ಯಾನಿಂಗ್ ಮತ್ತು ಡಿಜಿಟಲೀಕರಣದ ಕುರಿತು.

ಓದಲಾಗಿದೆ:
1) ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ಇವರ ಪತ್ರ ಸಂಖ್ಯೆ: ಕಾಂಪ್/89/2021-22 ದಿನಾಂಕ: 30-03-2022.
2) 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ:360.

***

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಪ್ರಸ್ತಾವನೆಯಲ್ಲಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ, ನೋಂದಣಿ ಕಾಯ್ದೆ, 1908ರ ಅಡಿಯಲ್ಲಿ ನೋಂದಣಿಯಾದ ದಸ್ತಾವೇಜುಗಳನ್ನು ದಾಖಲಿಸಿದ ರಿಜಿಸ್ಟರ್‌ಗಳನ್ನು, ಸೂಚಿಗಳನ್ನು ಹಾಗೂ ನಿಗಧಿಪಡಿಸಿದ ಇತರೆ ರಿಜಿಸ್ಟರ್ ಹಾಗೂ ವಹಿಗಳನ್ನು ಕರ್ನಾಟಕ ನೋಂದಣಿ ನಿಯಮಗಳು 1965ರ ನಿಯಮ 205ರನ್ವಯ ಶಾಶ್ವತವಾಗಿ ಹಾಗೂ ಸುರಕ್ಷಿತವಾಗಿ ಕಾಯ್ದಿರಿಸಬೇಕಾಗಿರುತ್ತದೆ. ಸದರಿ ರಿಜಿಸ್ಟರ್ ಹಾಗೂ ವಹಿಗಳಿರುವ ನಮೂನೆಗಳನ್ನು ಸಾರ್ವಜನಿಕರು ತಪಾಸಿಸಬೇಕೆಂದು ಮತ್ತು ಅವುಗಳ ಪ್ರತಿಗಳನ್ನು ನೀಡಬೇಕೆಂದು ಕೋರಿದಾಗ ನೋಂದಣಿ ಕಾಯ್ದೆ, 1908ರ ಕಲಂ 57ರನ್ವಯ ಅವುಗಳನ್ನು ಸಾರ್ವಜನಿಕರ ತಪಾಸಣೆಗೆ ಒದಗಿಸಬೇಕಾಗಿರುತ್ತದೆ ಹಾಗೂ ಅವುಗಳ ಪ್ರತಿಗಳನ್ನು ಪೂರೈಸಬೇಕಾಗಿರುತ್ತದೆ. ಈ ದಿಶೆಯಲ್ಲಿ ಶಾಶ್ವತ ದಾಖಲಾತಿಗಳನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಹೋಗುವುದು ಇಲಾಖೆಯ ಜವಾಬ್ದಾರಿಯಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಭೌತಿಕ ದಾಖಲಾತಿಗಳನ್ನು ಸ್ಕ್ಯಾನಿಂಗ್ ಹಾಗೂ ಡಿಜಿಟಲೀಕರಣ ಮಾಡಿಸುವ ಮೂಲಕ ಹಲವಾರು ವರ್ಷಗಳವರೆಗೆ ಸುರಕ್ಷಿತವಾಗಿ ಸಂರಕ್ಷಿಸಿಡಬಹುದಾಗಿರುತ್ತದೆ. ಸ್ಕ್ಯಾನಿಂಗ್ ತಂತ್ರಾಂಶವು ಡಿಜಿಟಲ್ ತಾಂತ್ರಿಕತೆಯುಳ್ಳದ್ದಾಗಿರುವುದರಿಂದ ಸ್ಕ್ಯಾನಿಂಗ್ ಮಾಡಿದ ದಾಖಲಾತಿಗಳನ್ನು ಸಾರ್ವಜನಿಕರಿಗೆ ಸುಲಭವಾಗಿ ನೀಡಬಹುದಾಗಿರುತ್ತದೆ ಹಾಗೂ ಅಂತರ್ಜಾಲದ ಮೂಲಕ ಸಾರ್ವಜನಿಕರಿಗೆ ವೀಕ್ಷಣೆಗೆ ಒದಗಿಸಬಹುದಾಗಿರುತ್ತದೆ ಮತ್ತು ಅವುಗಳ ಪ್ರತಿಗಳನ್ನು ಹಲವಾರು ಕಛೇರಿ ಹಾಗೂ ಕೇಂದ್ರಗಳ ಮೂಲಕ ಸಾರ್ವಜನಿಕರಿಗೆ ಏಕಕಾಲದಲ್ಲಿ ಒದಗಿಸಬಹುದಾಗಿರುತ್ತದೆ.

ಶಾಶ್ವತ ದಾಖಲಾತಿಗಳನ್ನು ಡಿಜಿಟಲೀಕರಣ ತಂತ್ರಜ್ಞಾನದಲ್ಲಿ ರಕ್ಷಿಸಿಡುವುದರಿಂದ ಹಲವಾರು ವರ್ಷಗಳವರೆಗೆ ದಾಖಲಾತಿಗಳನ್ನು ಸುರಕ್ಷಿತವಾಗಿ ಸಂರಕ್ಷಿಸಿಡಬಹುದಾಗಿರುತ್ತದೆ. ಸಾರ್ವಜನಿಕರ ಸ್ಥಿರ ಸ್ವತ್ತುಗಳ ಮಾಲೀಕತ್ವದ ನೋಂದಣಿ ದಸ್ತಾವೇಜುಗಳು ಹಾಗೂ ತತ್ಸಂಬಧಿತ ದಾಖಲಾತಿಗಳನ್ನು ಬಹು ಮೌಲ್ಯದ ದಾಖಲಾತಿಗಳಾಗಿರುವುದರಿಂದ ಅವುಗಳನ್ನು ಸ್ಕ್ಯಾನಿಂಗ್ ಮತ್ತು ಡಿಜಿಟಲೀಕರಣ ಮಾಡಿಸುವುದು ಇಲಾಖೆಯ ದೃಷ್ಟಿಯಿಂದ ಹಾಗೂ ನೋಂದಣಿ ಕಾಯ್ದೆ, 1908ರಲ್ಲಿ ವಿಧಿಸಿದ ಶಾಸನಾತ್ಮಕ ಹೊಣೆಗಾರಿಕೆಯಿಂದ ಅತ್ಯವಶ್ಯವಾಗಿರುತ್ತದೆ.

"ಎಲ್ಲಾ ಪಾರಂಪರಿಕ ನೋಂದಾಯಿತ ಶಾಶ್ವತ ದಾಖಲೆಗಳನ್ನು ಫೋರ್ಜರಿ/ ನಕಲಿ/ಮೋಸ ಮಾಡುವುದನ್ನು ತಡೆಯಲು ರೂ.15.00 ಕೋಟಿಗಳ ವೆಚ್ಚದಲ್ಲಿ ಹಂತ ಹಂತವಾಗಿ ಸ್ಕ್ಯಾನಿಂಗ್ ಮಾಡಲಾಗುವುದು. ಮೊದಲನೇ ಹಂತದಲ್ಲಿ ಬಿಬಿಎಂಪಿ ಮತ್ತು 10 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬರುವ ದಾಖಲೆಗಳನ್ನು ಕೈಗೊಳ್ಳಲಾಗುವುದು" ಎಂದು 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ, ಈ ಕೆಳಗೆ ತಿಳಿಸಿರುವ ಉಪನೋಂದಣಿ ಕಛೇರಿಗಳಲ್ಲಿ, ಕಛೇರಿ ಪ್ರಾರಂಭವಾದ ದಿನಾಂಕದಿಂದ 2004 ರವರೆಗೆ ಲಭ್ಯವಿರುವ ಶಾಶ್ವತ ದಾಖಲೆಗಳನ್ನು ರೂ.15.00 ಕೋಟಿಗಳ ಅನುದಾನದಲ್ಲಿ ಸ್ಕ್ಯಾನಿಂಗ್ ಪ್ರಕ್ರಿಯೆ ಕೈಗೊಳ್ಳಲು ಅನುಮತಿ ನೀಡುವಂತೆ ಕೋರಿರುತ್ತಾರೆ.

....2

| ಕ್ರ. ಸಂ. | ಉಪ ನೋಂದಣಿ ಕಛೇರಿ | ಜಿಲ್ಲಾ ನೋಂದಣಿ ಕಛೇರಿ |
|---|---|---|
| 1 | ಜಯನಗರ | ಜಯನಗರ |
| 2 | ಬೊಮ್ಮನಹಳ್ಳಿ | |
| 3 | ಕೆಂಗೇರಿ | |
| 4 | ರಾಜಾಜಿನಗರ | ರಾಜಾಜಿನಗರ |
| 5 | ಪೀಣ್ಯ | |
| 6 | ವಿಜಯನಗರ | |
| 7 | ಕೆ.ಆರ್.ಪುರಂ | ಶಿವಾಜಿನಗರ |
| 8 | ಇಂದಿರಾನಗರ | |
| 9 | ಆನೇಕಲ್ | ಬಸವನಗುಡಿ |
| 10 | ಚಾಮರಾಜಪೇಟೆ | |
| 11 | ಯಲಹಂಕ | ಗಾಂಧಿನಗರ |
| 12 | ಬಿಡಿಎ | |
| 13 | ಹೊಸಕೋಟೆ | ಬೆಂಗಳೂರು ಗ್ರಾಮಾಂತರ |
| 14 | ನೆಲಮಂಗಲ | |
| 15 | ದೇವನಹಳ್ಳಿ | |
| 16 | ದೊಡ್ಡಬಳ್ಳಾಪುರ | |
| 17 | ರಾಮನಗರ | ರಾಮನಗರ |
| 18 | ಮಂಗಳೂರು ಸಿಟಿ | ಮಂಗಳೂರು |
| 19 | ಮಂಗಳೂರು ತಾಲ್ಲೂಕು | |
| 20 | ಮೈಸೂರು (ಉತ್ತರ) | ಮೈಸೂರು |
| 21 | ಮೈಸೂರು (ದಕ್ಷಿಣ) | |
| 22 | ಬೆಳಗಾವಿ | ಬೆಳಗಾವಿ |
| 23 | ಬಳ್ಳಾರಿ | ಬಳ್ಳಾರಿ |
| 24 | ದಾವಣಗೆರೆ | ದಾವಣಗೆರೆ |
| 25 | ಹುಬ್ಬಳ್ಳಿ | ಧಾರವಾಡ |
| 26 | ಧಾರವಾಡ | |
| 27 | ಕಲಬುರಗಿ | ಕಲಬುರಗಿ |
| 28 | ಬಿಜಾಪುರ | ಬಿಜಾಪುರ |
| 29 | ತುಮಕೂರು | ತುಮಕೂರು |

ಮೇಲೆ ಓದಲಾದ ಕ್ರಮ ಸಂಖ್ಯೆ(2)ರಲ್ಲಿ, 2022-23ನೇ ಸಾಲಿನ ಆಯವ್ಯಯದ ಕಂಡಿಕೆ-360ರಲ್ಲಿ ಘೋಷಿಸಿರುವಂತೆ, "ಎಲ್ಲಾ ಪಾರಂಪರಿಕ ನೋಂದಾಯಿತ ಶಾಶ್ವತ ದಾಖಲೆಗಳನ್ನು ಖೋಟಾ/ ನಕಲಿ/ಮೋಸ ಮಾಡುವುದನ್ನು ತಡೆಯಲು ಹಂತ ಹಂತವಾಗಿ ಸ್ಕ್ಯಾನಿಂಗ್ ಮಾಡಲಾಗುವುದು. ಮೊದಲನೇ ಹಂತದಲ್ಲಿ, ಬಿಬಿಎಂಪಿ ಮತ್ತು 10 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬರುವ ಉಪ ನೋಂದಣಿ ಕಛೇರಿಗಳ ದಾಖಲೆಗಳನ್ನು ರೂ.15 ಕೋಟಿ ವೆಚ್ಚದಲ್ಲಿ ಸ್ಕ್ಯಾನಿಂಗ್ ಕೈಗೊಳ್ಳಲು ಸರ್ಕಾರವು ನಿರ್ಣಯಿಸಿದ್ದು, ಆದುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂಇ/30/ಎಂಎನ್‌ಎಂಯು/2022**

**ಬೆಂಗಳೂರು, ದಿನಾಂಕ: 12-04-2022**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23ನೇ ಸಾಲಿನ ಆಯವ್ಯಯದ ಕಂಡಿಕೆ-360ರನ್ವಯ "ಎಲ್ಲಾ ಪಾರಂಪರಿಕ ನೋಂದಾಯಿತ ಶಾಶ್ವತ ದಾಖಲೆಗಳನ್ನು ಖೋಟಾ/ ನಕಲಿ/ ಮೋಸ ಮಾಡುವುದನ್ನು ತಡೆಯಲು ಹಂತ ಹಂತವಾಗಿ ಸ್ಕ್ಯಾನಿಂಗ್ ಮಾಡಲಾಗುವುದು. ಮೊದಲನೇ ಹಂತದಲ್ಲಿ, ಬಿಬಿಎಂಪಿ ಮತ್ತು ಇತರೆ 10 ಮಹಾನಗರ ಪಾಲಿಕೆಗಳ

...3

ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ 29 ಉಪ ನೋಂದಣಿ ಕಛೇರಿಗಳು :

| ಕ್ರ. ಸಂ. | ಉಪ ನೋಂದಣಿ ಕಛೇರಿ | ಜಿಲ್ಲಾ ನೋಂದಣಿ ಕಛೇರಿ |
|---|---|---|
| 1 | ಜಯನಗರ | ಜಯನಗರ |
| 2 | ಬೊಮ್ಮನಹಳ್ಳಿ | |
| 3 | ಕೆಂಗೇರಿ | |
| 4 | ರಾಜಾಜಿನಗರ | ರಾಜಾಜಿನಗರ |
| 5 | ಪೀಣ್ಯ | |
| 6 | ವಿಜಯನಗರ | |
| 7 | ಕೆ.ಆರ್.ಪುರಂ | ಶಿವಾಜಿನಗರ |
| 8 | ಇಂದಿರಾನಗರ | |
| 9 | ಆನೇಕಲ್ | ಬಸವನಗುಡಿ |
| 10 | ಚಾಮರಾಜಪೇಟೆ | |
| 11 | ಯಲಹಂಕ | ಗಾಂಧಿನಗರ |
| 12 | ಬಿಡಿಎ | |
| 13 | ಹೊಸಕೋಟೆ | ಬೆಂಗಳೂರು ಗ್ರಾಮಾಂತರ |
| 14 | ನೆಲಮಂಗಲ | |
| 15 | ದೇವನಹಳ್ಳಿ | |
| 16 | ದೊಡ್ಡಬಳ್ಳಾಪುರ | |
| 17 | ರಾಮನಗರ | ರಾಮನಗರ |
| 18 | ಮಂಗಳೂರು ಸಿಟಿ | ಮಂಗಳೂರು |
| 19 | ಮಂಗಳೂರು ತಾಲ್ಲೂಕು | |
| 20 | ಮೈಸೂರು (ಉತ್ತರ) | ಮೈಸೂರು |
| 21 | ಮೈಸೂರು (ದಕ್ಷಿಣ) | |
| 22 | ಬೆಳಗಾವಿ | ಬೆಳಗಾವಿ |
| 23 | ಬಳ್ಳಾರಿ | ಬಳ್ಳಾರಿ |
| 24 | ದಾವಣಗೆರೆ | ದಾವಣಗೆರೆ |
| 25 | ಹುಬ್ಬಳ್ಳಿ | ಧಾರವಾಡ |
| 26 | ಧಾರವಾಡ | |
| | ಕಲಬುರಗಿ | ಕಲಬುರಗಿ |
| 28 | ಬಿಜಾಪುರ | ಬಿಜಾಪುರ |
| 29 | ತುಮಕೂರು | ತುಮಕೂರು |

ಪ್ರಾರಂಭವಾದ ದಿನಾಂಕದಿಂದ 2004 ರವರೆಗಿನ ದಾಖಲೆಗಳನ್ನು ಸ್ಕ್ಯಾನಿಂಗ್ ಹಾಗೂ ಡಿಜಿಟಲೀಕರಣ ಮಾಡಲು ಲೆಕ್ಕಶೀರ್ಷಿಕೆ: 2506-00-103-01-051ರಡಿ ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಒದಗಿಸಲಾಗಿರುವ ರೂ.1000.00 ಲಕ್ಷಗಳ ಅನುದಾನವನ್ನು ಬಳಸಿಕೊಂಡು ಸದರಿ ಅನುದಾನದ ಮಿತಿಗೊಳಪಟ್ಟು ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 348 ವೆಚ್ಚ-7/2022 ದಿನಾಂಕ: 06-04-2022 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್/ಪಿಪಿಡಿ/45/2022 ದಿನಾಂಕ: 08-04-2022ರಲ್ಲಿನ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಎ.ಜಿ.ವೀಣಾ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)

**ಇವರಿಗೆ:** ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂದಿನ ಇ-ಗೆಜೆಟ್‌ನಲ್ಲಿ ಪ್ರಕಟಣೆ ಮಾಡಲು ಕೋರಲಾಗಿದೆ.

ಪ್ರತಿ:

1) ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
4) ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು.
5) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6) ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
7) ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ. } ಐಜಿಆರ್‌ರವರ ಮುಖಾಂತರ.
8) ಎಲ್ಲಾ ಹಿರಿಯ /ಉಪ ನೋಂದಣಾಧಿಕಾರಿಗಳಿಗೆ. }
9) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7&8), ವಿಧಾನ ಸೌಧ, ಬೆಂಗಳೂರು.
10) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ಭೂಮಿ & ಯುಪಿಓಆರ್), ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11) ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ನೋಂದಣಿ ಮತ್ತು ಮುದ್ರಾಂಕ) ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.